

ಎಚ್‌.ಆರ್‌. ರಮೇಶ
ಕಲೆ: ಮದನ್ ಸಿ.ಪಿ.

# ಇರುವು

ಕೊನೆಗೆ ತಲುಪುವುದಾದರೂ ಎಲ್ಲಿಗೆ
ಸಿಗುವುದಾದರೂ ಏನು
ಆದೀತೆ ಎದೆಗೆ ನಿರುಮ್ಮಳ

ಇರುವುದನ್ನೇ ಕಳೆದುಕೊಳ್ಳುತ್ತಿರುವಾಗ
ಕಳೆದದ್ದರ ಭೂತವ ಹೊಕ್ಕು
ಇರುವಲ್ಲಿ ಕಳೆದುಹೋದರೆ
ಇರುವಿಗೆ ಉಂಟೆ ಇರುವು

ಸೃಷ್ಟಿಗೆ ಕೊಂಡಿಯಾಗಿರುವುದು ಅದೃಷ್ಟವೇ
ಸರಿ
ಘಟಿಸುತ್ತಿರುವುದು ಘಟಿಸಿರುವುದು
ನಿರೀಕ್ಷಿತವಲ್ಲ
ಆದರೆ ದಕ್ಕಿದ್ದನ್ನು
ಇರಗೊಡುತಿಲ್ಲ

ಸೃಷ್ಟಿಯ ಬಂಧದಿಂದ ಹೋಗುವುದಾದರೂ
ಎಲ್ಲಿಗೆ
ಇರುವುದನ್ನು ಇರಗೊಡದೆ
ಏನನು ಪಡೆಯುವುದು

